ಇಲ್ಲ. ಅವರು ಯಾವ ಬಗೆಯ ಚಿಂತಕರು, ಯಾವ ಬಗೆಯ ಲೇಖಕರು ಎನ್ನುವುದನ್ನ ನಾವು ಅವರು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿ ಕೊಟ್ಟ ಅನುವಾದಗಳ ಮೂಲಕವೇ ತಿಳಿಯಬೇಕಾಗಿದೆ. ಹಾಗೆ ತಿಳಿಯುವುದು ತಪ್ಪೇನಲ್ಲ. ಆದರೆ, ಆ ಅನುವಾದಿತ ಕೃತಿಗಳ ಒಟ್ಟೂ ನಿಲುವುಗಳ ಬಗೆಗೆ ನಮಗೆ ಏನಾದರೂ ಪ್ರಶ್ನೆಗಳು ಹುಟ್ಟಿದರೆ, ಆ ಪ್ರಶ್ನೆಗಳನ್ನು ಸರಸ್ವತಿಯವರು ಎದುರಿಸಿದರೆ, ಏನಾದರೂ ಆ ಬಗೆಗೆ ವಿವರಣೆ ನೀಡಿದರೆ, ಎಂದೂ ಒಮ್ಮೊಮ್ಮೆ ಅವರ ಅನುವಾದಿತ ಕೃತಿಗಳನ್ನು ಓದುವಾಗ ಅನಿಸಬಹುದು. ಆದರೆ, ಅನುವಾದಕ್ಕೆ ಕೃತಿಗಳನ್ನು ಆಯ್ದುಕೊಳ್ಳುವ ಒಂದು ಕ್ರಿಯೆಯ ಹಿಂದೆಯೇ ಅನುವಾದಕರ ಒಂದು ನೈತಿಕ ನಿರ್ಣಯವಿರುತ್ತದೆ. ತಾನು ಅನುವಾದಕ್ಕೆ ಎತ್ತಿಕೊಂಡ ಕೃತಿಯ ಮೂಲಕವೇ ಬಿಡಿಯಾಗಿ ಹೇಳಬೇಕಾದುದದನ್ನೆಲ್ಲ ಇಡಿಯಾಗಿ, ಅತ್ಯಂತ ಸೂಕ್ಷ್ಮವಾಗಿ ಹೇಳಿರಬಹುದಾಗಿದೆ. ಈ ಅರ್ಥದಲ್ಲಿ ಸರಸ್ವತಿಯವರು ಅನುವಾದ ಮಾಡಿದ ಕೃತಿಗಳನ್ನು ಓದುವಾಗ ಓದುಗ ಒಂದಿಷ್ಟು ಸೃಜನಶೀಲತೆಯ ಗುಣವನ್ನೂ ಪಡೆದಿರಬೇಕಾಗುತ್ತದೆ.

ಸರಸ್ವತಿಯವರು ಮೊಟ್ಟ ಮೊದಲು ಅನುವಾದ ಮಾಡಿದ ಕೃತಿ ಇರಾವತಿ ಕರ್ವೆ ಅವರ 'ಯುಗಾಂತ' ಎನ್ನುವ ಬಹು ಚರ್ಚಿತ ಕೃತಿ. ಇದನ್ನು ಸರಸ್ವತಿಯವರು ಕನ್ನಡಕ್ಕೆ ತಂದಾಗ, ಕನ್ನಡದಲ್ಲೂ ಈ ಕೃತಿಯ ಕುರಿತು ಬೇರೆ ಬೇರೆ ಬಗೆಯ ಚರ್ಚೆಗಳು ಆದವು. ಮುಖ್ಯವಾಗಿ ಮಹಾಭಾರತದಂತಹ ಕೃತಿಯ ಮಾನುಷೀಕರಣದ ಪ್ರಕ್ರಿಯೆ ಅನೇಕ ಆಲೋಚನೆಗಳನ್ನು ಕನ್ನಡದಲ್ಲೂ ಆಗ ಹುಟ್ಟು ಹಾಕಿತು. ವೇದವ್ಯಾಸರು ಬರೆದ ಮಹಾಭಾರತದ ಒಟ್ಟು ಸಂವಿಧಾನವನ್ನು, ಈ ಕಾಲದ ನಮ್ಮ ಸಾಮಾಜಿಕ ವ್ಯಾಕರಣಕ್ಕೆ ತಂದು ಅರ್ಥೈಸುವ ಕ್ರಿಯೆಯೇ ಎಷ್ಟೋ ರೂಢಿಗತ ಓದುಗರಿಗೆ ತುಸು ದಿಗಿಲನ್ನೂ ಸೃಷ್ಟಿಸಿತು. ಸರಸ್ವತಿ ಅವರು ಕನ್ನಡಕ್ಕೆ ಅನುವಾದಿಸಿದ ಮರಾಠಿ ಕೃತಿಗಳು: ಯುಗಾಂತ (ಇರಾವತಿ ಕರ್ವೆ), ಸ್ತ್ರೀ–ಪುರುಷ (ಛಾಯಾ ದಾತಾರ), ದಿಗಂತದಾಚೆ (ದುರ್ಗಾ ಭಾಗವತ), ವಾಲ್ಮೀಕಿ ರಾಮಾಯಣ: ಶಾಪ ಮತ್ತು ವರ (ಶ್ರೀಪಾದ ರಘುನಾಥ ಭಿಡೆ), ಸುಂದರ ನಾನಾಗುವೆ (ಪು.ಲ. ದೇಶಪಾಂಡೆಯವರ ನಾಟಕ), ಮಾನವ ಎಚ್ಚತ್ತಾಗ (ಗೋದಾವರಿ ಪರುಳೇಕರ), ಸ್ವಾತಂತ್ರ್ಯ ಸಂಗ್ರಾಮದ ಮಹಾಭಾರತ (ಗ.ಪ. ಪ್ರಧಾನ್), ಇವಲ್ಲದೆ 'ಕನ್ನಡ ಶಿಖಾ' – ಕನ್ನಡ ಸ್ವಯಂಬೋಧಿನಿ, 'ಸರಸ್ವತಿ ವಿಚಾರ ಧಾರಾ' ಎನ್ನುವ ಸ್ವಂತ ಕೃತಿಗಳೂ ಪ್ರಕಟವಾಗಿವೆ.

ಈ ಮೇಲಿನ, ಸರಸ್ವತಿಯವರ ಅನುವಾದಿಸಿದ ಕೃತಿಗಳೇ ಕರ್ನಾಟಕ, ಮಹಾರಾಷ್ಟ್ರ ಎರಡೂ ನೆಲಗಳ ನೆಲೆಗಳ ಬಗೆಗೆ ಸರಸ್ವತಿಯವರ ಚಿಂತನೆಯ ದಿಕ್ಕುಗಳು ಹೇಗೆ ವಿಸ್ತಾರವಾಗುತ್ತ ಹೋದವು ಎನ್ನುವದನ್ನು ಕನ್ನಡ ಮರಾಠಿ ಎರಡೂ ಭಾಷೆಗಳನ್ನು ಬಲ್ಲವರಿಗೆ ಸ್ಪಷ್ಟ ಪಡಿಸುತ್ತವೆ. ಮೂಲಭೂತವಾಗಿ ಆಧುನಿಕತೆ ತಂದೊಡ್ಡಿದ ಜೀವನದ ದುಃಖಗಳು, ಅವುಗಳ ನಿರ್ವಚನಕ್ಕಾಗಿ ಈಗಾಗಲೇ ಪಾರಂಪರಿಕವಾಗಿ ಸಿದ್ಧವಾದ, ಹಲವು ಜ್ಞಾನಕೇಂದ್ರಗಳಿಂದ ಲಭ್ಯವಾದ, ದುಃಖದ ಅನುಭವದ ವಿಶ್ಲೇಷಣೆಯನ್ನು ನಿರಾಕರಿಸಿದವು. ವೇದವ್ಯಾಸರು ಮಹಾಭಾರತದಲ್ಲಿ ಯಾವುದನ್ನು ಸಂಸಾರ ಎಂದು ಗುರುತಿಸಿದರೋ ಅದು ಆಧುನಿಕ ದರ್ಶನಗಳ (ಅವುಗಳನ್ನೂ ದರ್ಶನಗಳೆಂದು ಕರೆಯುವುದಾದರೆ) ನೆಲೆಯಲ್ಲಿ ಸಮಾಜವಾಗಿ, ಸಮೂಹವಾಗಿ, ಜನಾಂಗೀಯ ವರ್ಗಗಳಾಗಿ ರೂಪಾಂತರಗೊಂಡವು. ರಾಷ್ಟ್ರ ಎನ್ನುವ ಕಲ್ಪನೆ ತಂದಿಟ್ಟ ಅನಾಹುತಗಳಂತೂ ಆಘಾತಕಾರಿಯಾಗಿ ಸ್ಫೋಟಗೊಂಡವು. ಈ ಎಲ್ಲ ಬದಲಾದ ಸನ್ನಿವೇಶಗಳು ಚಿಂತನೆಯ ಶರೀರದ ಆದಿ ಭೌತಿಕ, ಆದಿ ದೈವಿಕ, ಆಧ್ಯಾತ್ಮಿಕ ವಿಸ್ತಾರಗಳನ್ನೂ ಆಕ್ರಮಿಸಿ, ಇಡೀ ಪರಂಪರಾಗತ ಚಿಕಿತ್ಸಾ ಕ್ರಮಗಳನ್ನು ಮಾತ್ರವಲ್ಲ, ಚಿಕಿತ್ಸೆಗೆ ಅದು ಬಳಸುತ್ತಿದ್ದ ಉಪಕರಣಗಳು, ಮತ್ತು ಅವುಗಳನ್ನು ಬಳಕೆ ಮಾಡುತ್ತಿದ್ದ ಚಿಕಿತ್ಸಕರ ರಾಜಕಾರಣಗಳು ಕೂಡ ಮತ್ತೊಮ್ಮೆ ಚಿಕಿತ್ಸೆಗೆ ಒಳಪಡಿಸುವ ಒಂದು ಚಿಂತನೆ ಒಂದು ವರ್ಗದಲ್ಲಿ ಪ್ರಬಲವಾಯಿತು.